ಸಾಧ್ಯತೆಗಳಿಲ್ಲದಿದ್ದರೂ ಸಹ ಹಣ ಪಾವತಿ ಮಾಡಿದ್ದರಿಂದ ಒಬ್ಬ ಮುಖ್ಯ ಇಂಜಿನಿಯರ್ ಮತ್ತೊಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರನ್ನು ಅಮಾನತ್ತಿನಲ್ಲಿಟ್ಟಿದ್ದೇವೆ. ನಮ್ಮ ಸರ್ಕಾರದ ಪ್ರಯತ್ನದಿಂದಾಗಿ ಹೋರಾಟ ಮಾಡಿ ಬ್ಯಾಂಕ್ ಗ್ಯಾರಂಟಿ ಇದ್ದುದರಿಂದ 33 ಕೋಟಿ 37 ಲಕ್ಷ ರೂಪಾಯಿಗಳಷ್ಟು ಮುಂಗಡ ನೀಡಿದ್ದನ್ನು ಸರ್ಕಾರದವರಾದ ನಾವು ಮರಳಿ ಪಡಿದಿದ್ದೇವೆ. ಅದಕ್ಕೆ ಎಷ್ಟು ಬಡ್ಡಿಯಾಗುತ್ತಿತ್ತು, ಸರ್ಕಾರದ ಮೇಲೆ ಎಷ್ಟು ಲುಕ್ಸಾನು ಆಗಿದೆ, ಎಂಬಿತ್ಯಾದಿ ವಿವರಗಳನ್ನು ಈಗ ನಾನು ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಈಗಾಗಲೇ ಮಾನ್ಯ ರೇವಣ್ಣನವರು ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕೆಂದು ಅವರೇ ಒತ್ತಾಯಪಡಿಸಿರುವುದರಿಂದ ಉನ್ನತ ಮಟ್ಟದ ಯಾವುದಾದರೊಂದು ಸಮಿತಿ, ನಿವೃತ್ತ ಐಎಎಸ್, ಅಥವಾ ಅಡಿಷನಲ್ ಚೀಫ್ ಸೆಕ್ರೆಟರಿ, ಇಲ್ಲವೇ ಪ್ರಸ್ತುತ ಸೇವೆಯಲ್ಲಿರುವವರಿಂದ ತನಿಖೆ ಮಾಡಿಸಿದರೆ, ಸರ್ಕಾರ ಇದೆ, ಅದಕ್ಕೋಸ್ಕರ ಅವರ ಅಧಿಕಾರಿಗಳಿಂದ ಮಾಡಿಸಿದರು ಎಂದಾಗುತ್ತದೆ. ಆದುದರಿಂದ, ಅದರ ಬಗ್ಗೆ ತನಿಖೆ ಮಾಡುವುದಕ್ಕೆ ಇವತ್ತೇ ಆದೇಶ ಕೊಡುತ್ತೇನೆ. ತನಿಖಾ ವರದಿ ಬರಲಿ. ನಂತರ, ಅದರ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡೋಣ.

ಅಧ್ಯಕ್ಷರು: ದಯವಿಟ್ಟು ಈಗ ಮುಗಿಸಿಬಿಡಿ. ಈಗ ಸಾಕು. ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರ ಕೊಟ್ಟಿದ್ದಾರೆ, ತಾವು ಮುಗಿಸಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಈಗ ಇವರು ತನಿಖೆಯ ಬಗ್ಗೆ ಹೇಳಿದ್ದಾರೆ, ನಾನು ಅದನ್ನು ಸ್ವಾಗತಿಸುತ್ತೇನೆ. ಸಂಬಂಧಪಟ್ಟವರಿಗೆ ಶಿಕ್ಷೆಯಾಗಲಿ. ಅದರ ಬಗ್ಗೆ ನಮ್ಮ ಎರಡು ಮಾತಿಲ್ಲ. ಆದರೆ, ಆ ಪ್ರಕ್ರಿಯೆಯನ್ನು ಯಾವಾಗ ಪ್ರಾರಂಭಿಸುತ್ತೀರಿ ಎನ್ನುವ ವಿಚಾರವನ್ನು ಹೇಳುತ್ತಿಲ್ಲ. ಹಿಂದಿನದು ಬಿಡಿ, ಈಗ ಮುಂದೆ ಯಾವಾಗ ಪ್ರಾರಂಭ ಮಾಡುತ್ತಾರೆ?

ಅಧ್ಯಕ್ಷರು: ಅಲ್ಲಿಂದ ಸ್ಥಳಾಂತರಿಸುವುದನ್ನು ಕೈಬಿಟ್ಟಿದ್ದಾರೆ. ಬಾಲಕೃಷ್ಣರವರೆ, ಎಲ್ಲಾ ಡಿಸಿಷನ್ ಅನ್ನು ಇಲ್ಲಿಯೇ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈಗ ಅವರು ಉತ್ತರ ಕೊಟ್ಟಿದ್ದಾರೆ. ಅಲ್ಲಿಂದ ಸ್ಥಳಾಂತರವಾಗುವುದಿಲ್ಲವೆಂದು ಹೇಳಿದ್ದಾರೆ. ಈಗ ಈ ಕುರಿತಾದ ವಿಷಯವನ್ನು ಮುಕ್ತಾಯಗೊಳಿಸೋಣ. ವಿಷಯವನ್ನು ಪ್ರಸ್ತಾಪಿಸಲು ಮತ್ತೆ ಬೇರೆ ರೂಪದಲ್ಲಿ ತಮಗೆ ಅವಕಾಶ ಕಲ್ಪಿಸಿಕೊಡುತ್ತೇನೆ.

**6.ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ**

ವಿಷಯ: ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಭೂಸ್ವಾಧೀನ ಪಡಿಸಿಕೊಳ್ಳದ ಗುತ್ತಿಗೆದಾರರಿಗೆ ಮುಂಗಡ ಹಣ ಕೊಟ್ಟಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವವರೆಗೆ ನಾವು ಗಂಭೀರವಾಗಿ ಕುಳಿತು ಕೇಳಿದ್ದೇವೆ. ಅವರು ಹೇಳಿರುವ ವಿಷಯಗಳೆಲ್ಲವನ್ನೂ ಕೇಳಿದ್ದೇವೆ. ಅವರು ಎರಡು ವಿಷಯಗಳನ್ನು ಸದನದ ಗಮನಕ್ಕೆ ಗಂಭೀರವಾಗಿ ತಂದಿದ್ದಾರೆ. ಒಂದು, 31 ಕೋಟಿ ರೂಪಾಯಿಗಳ ಮುಂಗಡವನ್ನು without interest ಕೊಟ್ಟಿದ್ದಾರೆಂಬ ಆಪಾದನೆ ಮಾಡಿದ್ದಾರೆ. ಜಮೀನು hand over ಮಾಡದೆ work order ಕೊಟ್ಟಿದ್ದಾರೆಂದು ಹೇಳಿದ್ದಾರೆ. ಕೆಲವೊಂದನ್ನು ತನಿಖೆ ಮಾಡುತ್ತಿದ್ದಾರೆ. ನಾನು ಎಲ್ಲಾ ತನಿಖೆಗೂ ಸಿದ್ಧನಿದ್ದೇನೆ. ನಾವು ಕದ್ದು ಓಡಿಹೋಗುವಂಥಾದ್ದೇನಿಲ್ಲ. ನಿಲುವಳಿ ಸೂಚನೆಯಡಿ ಇದರ ಬಗ್ಗೆ ಇವತ್ತು ಚರ್ಚೆ ಮಾಡುವುದಕ್ಕೆ ನಾನು ಒಂದು ನೋಟೀಸ್ ಕೊಟ್ಟಿದ್ದೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕೆಲವು ಪತ್ರಿಕೆಗಳಲ್ಲಿ ಇದೊಂದು ದೊಡ್ಡ ಹಗರಣವಾಗಿದ್ದು, ಇಬ್ಬರು ಅಧಿಕಾರಿಗಳನ್ನು ಮಟ್ಟ ಹಾಕಿದರೆ ಉಳಿದವರು ಸರಿ ಹೋಗುತ್ತಾರೆಂದು ಹೇಳಿಕೆ ಕೊಟ್ಟಿದ್ದಾರೆ. ಅದಕ್ಕೋಸ್ಕರ, ಚರ್ಚೆ ಮಾಡೋಣ. ಏಕೆ ಹೆದರಬೇಕು? ರಾಜೀವ್‌ಗಾಂಧಿ ಯೂನಿವರ್ಸಿಟಿ ಪ್ರಾರಂಭವಾದ ದಿವಸದಿಂದ ಯಾವ ರೀತಿಯಲ್ಲಿ land acquisition ಆಯಿತು, ಅದಕ್ಕೆ ಯಾವ ರೀತಿ ಅಪ್ರೂವಲ್ ಸಿಕ್ಕಿತು, ಪ್ರತಿಯೊಂದನ್ನೂ ಚರ್ಚೆ ಮಾಡುವುದಕ್ಕೆ ಬೇರೆ ರೂಪದಲ್ಲಿ ಅಲ್ಲ, ನಾವು 15 ಜನ ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಸಭಾಧ್ಯಕ್ಷರೆ, ಮುಖ್ಯಮಂತ್ರಿಗಳು ಹೇಳುವ ಎಲ್ಲದಕ್ಕೂ ತಾವು ಅವಕಾಶ ಕೊಟ್ಟಿದ್ದೀರಿ, ನನಗೂ ಅವಕಾಶ ಕೊಡಿ.

ಶ್ರೀ ಎಂ. ಚಂದ್ರಪ್ಪ: ಸನ್ಮಾನ್ಯ ಯಡಿಯೂರಪ್ಪನವರು ತನಿಖೆಗೆ ಆದೇಶ ಮಾಡಿದ ಮೇಲೆ...

ಶ್ರೀ ಹೆಚ್.ಡಿ. ರೇವಣ್ಣ: ಚಂದ್ರಪ್ಪನವರೆ, ಒಂದು ನಿಮಿಷ ಇರಿ.

ಅಧ್ಯಕ್ಷರು: ಈಗ ಉತ್ತರ ಕೊಟ್ಟಿದ್ದಾರೆ. ಬಾಲಕೃಷ್ಣರವರು ಹೇಳಿದ್ದಾರೆ. ವಿಷಯ ಪ್ರಸ್ತಾಪಿಸಿದ್ದಾರೆ. ಮತ್ತೆ ಹೆಚ್ಚು ವಿಷಯ ಪ್ರಸ್ತಾಪಿಸಬೇಕಿದ್ದರೆ ನಾನು ಅವಕಾಶ ಕಲ್ಪಿಸಿಕೊಡುತ್ತೇನೆ.

(ಗೊಂದಲ)

ಶ್ರೀ ಎಂ. ಚಂದ್ರಪ್ಪ: ತನಿಖೆಗೆ ಆದೇಶ ಆದ ಮೇಲೆ ಮತ್ತೆ ಕೇಳಲು ಎಲ್ಲಿ ಬರುತ್ತದೆ? ಮಾನ್ಯ ಮುಖ್ಯಮಂತ್ರಿಯವರು ತನಿಖೆಗೆ ಆದೇಶ ಮಾಡಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಏನಾಗಿದೆ?

ಅಧ್ಯಕ್ಷರು: ಉತ್ತರವನ್ನು ಕೊಟ್ಟಿದ್ದಾರೆ. ನೀವೂ ಹೇಳಿದ್ದೀರಿ. ಬಾಲಕೃಷ್ಣರವರು ವಿಷಯ ಪ್ರಸ್ತಾಪ ಮಾಡಿದ್ದಾರೆ. ಉತ್ತರ ಕೊಟ್ಟಿದ್ದಾರೆ. ತಮಗೆ ಬೇರೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ದಯಮಾಡಿ, ಮಾನ್ಯ ಅಧ್ಯಕ್ಷರೆ...

(ಗೊಂದಲ)

ಶ್ರೀ ಎಂ. ಚಂದ್ರಪ್ಪ: ಅವರು ಚರ್ಚೆ ಮಾಡುವುದಾಗಿದ್ದರೆ ಬೇರೆ ನೋಟೀಸ್ ಕೊಡಲಿ. ದಯಮಾಡಿ, ಇದನ್ನು ಈಗ ಮುಕ್ತಾಯಗೊಳಿಸಬೇಕು.

ಅಧ್ಯಕ್ಷರು: ದಯಮಾಡಿ, ಚಂದ್ರಪ್ಪನವರೇ ಕುಳಿತುಕೊಳ್ಳಿ.

ಶ್ರೀ ಬಿ.ಸಿ. ಪಾಟೀಲ್: ಅದಕ್ಕೆಲ್ಲ ಅನಂತರ ಅವಕಾಶ ಕೊಡಿ. ಮೊದಲು ನಮಗೆ ಆಯವ್ಯಯದ ಮೇಲೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಒಂದು ವಿಷಯ ಹೇಳುತ್ತೇನೆ.

ಅಧ್ಯಕ್ಷರು: ಉತ್ತರ ಆದ ಮೇಲೆ ತಮಗೆ ಮತ್ತೆ ಅವಕಾಶ ಕೊಡುತ್ತೇನೆ. ಈಗ ಇದು ಸಾಕು. ಮಾನ್ಯ ರೇವಣ್ಣನವರೆ, ತಮಗೆ ಮತ್ತೊಮ್ಮೆ ಅವಕಾಶ ಕೊಡುತ್ತೇನೆ. ಬೇರೆ ರೂಪದಲ್ಲಿ ಅವಕಾಶ ಕೊಡುತ್ತೇನೆ. ತಾವು ಪ್ರಿಲಿಮಿನರಿಯಾಗಿ ಸಬ್‌ಮಿಟ್ ಮಾಡಿದ್ದೀರಿ ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೇ ಆದ್ದರಿಂದ, ತಮಗೆ ಅನಂತರ ಬೇರೆ ರೂಪದಲ್ಲಿ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸಿ.ಎಂ. ಉದಾಸಿ: ವಿಚಾರಣೆಗೆಂದು ಆದೇಶ ಆದ ಮೇಲೆ ಮತ್ತೆ ಚರ್ಚೆ ಮಾಡಲು ಅವಕಾಶ ಇಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಿಯಮ 60 ರ ಅಡಿಯಲ್ಲಿ ನೀವು ಚರ್ಚೆಗೆ ಅವಕಾಶ ಕೊಡಬಾರದಿತ್ತು. ಕೊಟ್ಟಿದ್ದೀರಿ. ಕೊಟ್ಟು, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಹೇಳಿಸಿದ್ದೀರಿ. ಉತ್ತರ ಹೇಳಿಸಿದ ಮೇಲೆ ಎಲ್ಲಿ ಏನೋ ದೊಡ್ಡ ಹಗರಣವಾಗಿದೆ ಎಂಬಂತೆ ಸಭೆಗೆ ಅರ್ಥವಾಗುತ್ತಿದೆ. ಅದು ಹೌದೋ, ಅಲ್ಲವೋ? ಎಂಬುದಕ್ಕೆ ನಿಯಮ 60ರ ಅಡಿಯಲ್ಲಿ ಸಮಗ್ರವಾಗಿ ಚರ್ಚೆಗೆ ಅವಕಾಶ ಕೊಡಿ. ಆಪಾದನೆಯಾಗಿದ್ದರೆ ದಯಮಾಡಿ ಅವಕಾಶ ಕೊಡಬೇಕು.

ಅಧ್ಯಕ್ಷರು: ಸಮಯ ಎಂದರೆ ಈಗಲೇ ನಿಗದಿ ಮಾಡಲು ಆಗುವುದಿಲ್ಲ. ಅವರು ತನಿಖೆ ಮಾಡಲು ಒಪ್ಪಿಕೊಂಡಿದ್ದಾರೆ. ದಯಮಾಡಿ, ಇದನ್ನು ಇಲ್ಲಿಗೆ ಮುಕ್ತಾಯ ಮಾಡಿ. ಮತ್ತೊಮ್ಮೆ ಬೇರೆ ರೂಪದಲ್ಲಿ ತಮಗೆ ಅವಕಾಶ ಕೊಡುತ್ತೇನೆ. ಈಗ ಇದು ಬೇಡ. ಇದು ಸರಿಯಲ್ಲ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ: ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕಾದಂಥ ಕಾರಣಗಳು ಇಲ್ಲ. ಈ ವಿಚಾರದಲ್ಲಿ ಆದೇಶ ಮಾಡಿದ ಮೇಲೆ...

ಅಧ್ಯಕ್ಷರು: ಶಿವಲಿಂಗೇಗೌಡರೆ, ದಯಮಾಡಿ ತಾವು ಕುಳಿತುಕೊಳ್ಳಿ. ಒಬ್ಬರು ಮಾತನಾಡಿ. ನೀವು...

(ಗೊಂದಲ)

ಅಧ್ಯಕ್ಷರು: ಒಬ್ಬರಿಗೊಬ್ಬರು ಮಾತನಾಡಿದರೆ, ಒಟ್ಟಿಗೆ ಇಬ್ಬರು ಮೂರು ಜನ ಮಾತನಾಡಿದರೆ ಹೇಗೆ?

ಶ್ರೀ ಸಿ.ಎಂ. ಉದಾಸಿ: ನಿಯಮಾವಳಿಯನ್ನು ಉಲ್ಲಂಘನೆ ಮಾಡಿರುವುದಕ್ಕೆ ಸ್ಪಷ್ಟವಾದ ದಾಖಲೆಗಳು ಇರುವುದರಿಂದ ಹಣವನ್ನು ವಾಪಸ್ ತೆಗೆದುಕೊಳ್ಳಲಾಗಿದೆ. ಇದರ ಬಗ್ಗೆ ಈಗ ಚರ್ಚೆ ಮಾಡುವುದಕ್ಕಿಂತ ವಿಚಾರಣೆಯಾದ ಮೇಲೆ ಚರ್ಚೆ ಮಾಡಬಹುದು.

(ಗೊಂದಲ)

ಅಧ್ಯಕ್ಷರು: ರೇವಣ್ಣನವರೆ, ಈ ಉತ್ತರ ಆದ ಮೇಲೆ ನಿಮಗೆ ಕೊಡೋಣವೆಂದು ಇದ್ದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ನನಗೆ ಮಾತನಾಡಲು ಅವಕಾಶ ಕೊಡಿ. ಇಲ್ಲದಿದ್ದರೆ one side ಮಾಡಿದಂತೆ ಆಗುತ್ತದೆ. ಉದಾಸಿಯವರೆ, ದಯಮಾಡಿ ನಾನು ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ: 33 ಕೋಟಿ ರೂಪಾಯಿಗಳನ್ನು ಭೂಮಿಯನ್ನು ವಶಪಡಿಸಿಕೊಳ್ಳದೇ ಕೊಟ್ಟಿರುವುದು ನಿಯಮ ಬಾಹಿರ. ಈ ರೀತಿ ಕೊಟ್ಟಿರುವುದು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಎಂದೂ ನಡೆದಿಲ್ಲ. ಇದು ಮೊದಲ ಬಾರಿಗೆ ಆಗಿರುವ ಲೋಪದೋಷ. ಅದನ್ನು ಸರಿಪಡಿಸತಕ್ಕ ಕೆಲಸವನ್ನು ಇಲಾಖೆಯ ಅಧಿಕಾರಿಗಳು ಮಾಡಿದ್ದಾರೆ. ಅದರ ಪ್ರಕಾರ ಕ್ರಮ ಜರುಗಿಸಿದ್ದಾರೆ. ಅನಂತರ ವಿಚಾರಣೆಗೆ ಆದೇಶ ಮಾಡಿರುವಾಗ ಪುನಃ ಇದರ ಬಗ್ಗೆ ಚರ್ಚೆ ಮಾಡುವ ಅಗತ್ಯ ಇಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ವಿಚಾರಣೆಯನ್ನು 15 ದಿವಸ ಇಲ್ಲವೇ ಒಂದು ತಿಂಗಳಿನಲ್ಲಿ ಪೂರ್ಣ ಮಾಡುತ್ತೇವೆಂದು ಸಮಯವನ್ನು ಹೇಳಿ.

(ಗೊಂದಲ)

ಅಧ್ಯಕ್ಷರು: ಈಗ ಈ ವಿಚಾರವನ್ನು ಮುಕ್ತಾಯಗೊಳಿಸಿದ್ದೇನೆ. ಇದರ ಬಗ್ಗೆ ಬೇರೆ ರೂಪದಲ್ಲಿ ಕೇಳಿ. ಈಗ ಈ ವಿಷಯವನ್ನು ಪ್ರಾಸ್ತಾವಿಕವಾಗಿ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ, ಈಗ ನಿಲುವಳಿ ಸೂಚನೆಗೆ ಒಪ್ಪಿಗೆಯನ್ನು ನಿರಾಕರಿಸಿ ಮಾನ್ಯ ಸದಸ್ಯರು ಬೇರೆ ರೂಪದಲ್ಲಿ ತಂದರೆ ಚರ್ಚೆಗೆ ಅವಕಾಶ ಕೊಡಲು ತಯಾರಿದ್ದೇನೆ. ಈಗ ಇದನ್ನು ಮುಕ್ತಾಯ ಮಾಡೋಣ. ಈಗ ಧ್ರುವನಾರಾಯಣ್‌ರವರು ಆಯವ್ಯಯದ ಮೇಲೆ ಮಾತನಾಡಲಿ. 4–5 ಜನ ಸದಸ್ಯರುಗಳಿಗೆ ಆಯವ್ಯಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಮಧ್ಯಾಹ್ನ 12.30 ಗಂಟೆಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ. ಮಧ್ಯಾಹ್ನ 12.30 ಗಂಟೆಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಲು ಸಮಯ ನಿಗದಿ ಮಾಡಿದ್ದೇನೆ. ಆದ್ದರಿಂದ ಎಲ್ಲರೂ ಐದೈದು ನಿಮಿಷ ಮಾತನಾಡಿ ಮುಗಿಸಬೇಕಾಗಿ ವಿನಂತಿಸುತ್ತೇನೆ.

(ಗೊಂದಲ)

**(ಈ ಹಂತದಲ್ಲಿ ಜ್ಯಾತ್ಯತೀತ ಜನತಾದಳದ ಬಹಳಷ್ಟು ಸದಸ್ಯರುಗಳು ಧರಣಿ ಮಾಡಲು ಸದನದ ಬಾವಿಗೆ ಆಗಮಿಸಿದರು)**

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಇದು ಸರಿಯಲ್ಲ. ತಮಗೆ ಬೇರೆ ರೂಪದಲ್ಲಿ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಪ್ರತಿಯೊಂದಕ್ಕೂ ಈ ರೀತಿ ಧರಣಿ ಮಾಡುವುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ಅದನ್ನು ಸ್ಥಳಾಂತರ ಮಾಡುವುದಿಲ್ಲವೆಂದು ಹೇಳಿದ್ದಾರೆ. ಆದರೂ ಈ ರೀತಿ ಧರಣಿ ಮಾಡುವುದು ಸರಿಯಲ್ಲ. ಇದು ಒಳ್ಳೆಯದಲ್ಲ. ತಮಗೆ ಬೇರೆ ರೂಪದಲ್ಲಿ ಅನಂತರ ಅವಕಾಶ ಮಾಡಿಕೊಡುತ್ತೇನೆ. (ಗೊಂದಲ) ಬಜೆಟ್ ಮೇಲೆ ಚರ್ಚೆ ಮಾಡಲು ಅವಕಾಶ ಕೊಡಿ ಎಂದು ಒಂದು ಕಡೆ ಹೇಳುತ್ತೀರಿ. ನಾಳೆ ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ. ನಾಳೆ ಅವಕಾಶ ಕೊಡುತ್ತೇನೆ. ಚರ್ಚೆ ಮಾಡಿ. ನಾನು ಅಧ್ಯಕ್ಷನಾಗಿ ತಮಗೆ ಭರವಸೆ ಕೊಡುತ್ತಿದ್ದೇನೆ, ನನ್ನ ಮಾತನ್ನು ನೀವು ನಂಬುವುದಿಲ್ಲವೆ? ಇದರ ಬಗ್ಗೆ ಏನಾದರೂ ಚರ್ಚೆ ಮಾಡುವುದಾದರೆ, ನಾಳೆ ತಮಗೆ ಅವಕಾಶ ಕೊಡುತ್ತೇನೆ. ಆದರೆ, ಈಗ ಇದರ ಬಗ್ಗೆ ಚರ್ಚೆ ಇಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಇಲ್ಲಿ ಏನೋ ಭಾರಿ ಅವ್ಯವಹಾರವಾಗಿದೆ, ಏನೋ ತೆಗೆದುಕೊಂಡಿದ್ದಾರೆ ಎನ್ನತಕ್ಕದ್ದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ಒಬ್ಬರು ಮಾತನಾಡಿ. ನಿಮ್ಮಲ್ಲೇ ಬಡಿದಾಡುತ್ತೀರಿ. ಈ ರೀತಿ ಮಾಡುವುದರಿಂದ ಬೇರೆ business ಮತ್ತು proceedings stock ಆಗುತ್ತದೆ. ಇದಕ್ಕೆ ನಾಳೆ ನಿಮಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದರೂ ಈ ರೀತಿ ಧರಣಿ ಮುಂದುವರಿಸುವುದು ಸರಿಯಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಇದು ಮೊದಲು ಬೆಂಗಳೂರಿನ ಜಯನಗರದಲ್ಲಿ ಇತ್ತು. ಅಲ್ಲಿಂದ ಇದನ್ನು ರಾಮನಗರಕ್ಕೆ ಏಕೆ ಬದಲಾವಣೆ ಮಾಡಿದರು? ಅದು ಮೊದಲು ಜಯನಗರಕ್ಕೆ ವಾಪಸ್ ಬರಬೇಕು.

ಅಧ್ಯಕ್ಷರು: ಇದಕ್ಕೆ ನಾಳೆ ಖಂಡಿತ ಅವಕಾಶ ಕೊಡುತ್ತೇನೆ. ಧರಣಿಯನ್ನು ಮುಗಿಸಿ.

ಒಬ್ಬ ಮಾನ್ಯ ಸದಸ್ಯರು: ದಯಮಾಡಿ, ಆ ವಿಶ್ವವಿದ್ಯಾನಿಲಯವನ್ನು ಮೊದಲು ಇದ್ದ ಬೆಂಗಳೂರಿಗೆ ತರಬೇಕು.

(ಗೊಂದಲ)

ಅಧ್ಯಕ್ಷರು: ದಯಮಾಡಿ, ಎಲ್ಲಾ ಸದಸ್ಯರುಗಳು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಚಂದ್ರಣ್ಣನವರೇ, ಒಂದು ನಿಮಿಷ, ಕುಳಿತುಕೊಳ್ಳಿ. ದಯಮಾಡಿ, ಎಲ್ಲಾ ಸದಸ್ಯರುಗಳು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು): ದಯಮಾಡಿ, ಮಾನ್ಯ ಸದಸ್ಯರುಗಳಲ್ಲಿ ವಿನಂತಿ. ಅಧ್ಯಕ್ಷರೆ, ಅತ್ಯಂತ ವಿನಯದಿಂದ..

ಶ್ರೀ ಹೆಚ್.ಡಿ.ರೇವಣ್ಣ: ತಾವು ಒಂದು ನಿಮಿಷ ದಯಮಾಡಿ ಈಲ್ಡ್ ಆಗಿ ಸಾರ್.

(ಗೊಂದಲ)

ಅಧ್ಯಕ್ಷರು: ಅವರು ಒಂದು ನಿಮಿಷ ಮಾತನಾಡುತ್ತಾರೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅಪ್ಪಚ್ಚುರಂಜನ್‌ರವರೇ ಕುಳಿತುಕೊಳ್ಳಿ. ನನ್ನ ಮಾತನ್ನು ಏಕೆ ಕೇಳುವುದಿಲ್ಲ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ನಾನು ಬಹಳ ವಿಷಯಗಳ ಬಗ್ಗೆ ಬಹಳ ಮೌನವಾಗಿದ್ದೇನೆ. ತಾವು ಒತ್ತಾಯ

ಮಾಡಿದಿರಿ, ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಬಗ್ಗೆ ಚರ್ಚೆ ಆಗಬೇಕು, ತನಿಖೆಯಾಗಬೇಕು, ಗಂಡಸುತನ ಇದ್ದರೆ ತನಿಖೆ ಮಾಡಿ ಎಂದು, ನಾನು ಏನು ಹೇಳಿದ್ದೇನೆ, ಯಾವ ಕಾರಣಕ್ಕೂ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯವನ್ನು ರಾಮನಗರ ಬಿಟ್ಟು ಬೇರೆ ಕಡೆ ಮಾಡುವ ಯೋಚನೆ ಇಲ್ಲ. ಇದು ಮೊದಲನೆಯದು, ಎರಡನೆಯದು, ಇತ್ತೀಚಿನ ವರ್ಷಗಳಲ್ಲಿ ಕಂಡರಿಯದ ರೀತಿಯಲ್ಲಿ ಲೋಪದೋಷಗಳಾಗಿವೆ. ಜಮೀನನ್ನೇ ಪೂರ್ಣ ತೆಗೆದುಕೊಳ್ಳದೆಯೇ, estimate, plan ಮಂಜೂರಾತಿ ಆಗದೆಯೇ ಯಾರೋ ಗುತ್ತಿಗೆದಾರನಿಗೆ 33 ಕೋಟಿ ಹಣವನ್ನು ಕೊಟ್ಟಿದ್ದಾರೆ. ನಾನು ಬಂದ ತಕ್ಷಣ ಬೆನ್ನು ಹತ್ತಿ ಬ್ಯಾಂಕ್ ಗ್ಯಾರಂಟಿಗೆ ಹೈದ್ರಾಬಾದ್‌ಗೆ ಹೋಗಿ ಕುಳಿತು ಆ ಹಣವನ್ನು ವಸೂಲಿ ಮಾಡಿಕೊಂಡು ಬಂದಿದ್ದೇನೆ. ಆ ದುಡ್ಡನ್ನು ಇಟ್ಟುಕೊಂಡ ಕಾಲದಲ್ಲಿ ನಮಗೆ ಅದರ ಮೇಲೆ ಏನು ಬಡ್ಡಿ ತಗಲುತ್ತದೆ ಆ ಭಾರ ನಮ್ಮ ಮೇಲೆ ಬಿದ್ದಿದೆ, ಆದರೆ ಆ ಹಣವನ್ನು ವಸೂಲಿ ಮಾಡುವಲ್ಲಿ ಯಶಸ್ವಿಯಾಗಿದ್ದೇವೆ. ರೇವಣ್ಣನವರು ಅಥವಾ ಮತ್ತೊಬ್ಬ ಸದಸ್ಯರ ಬಗ್ಗೆ ನಾನು ಹೇಳುತ್ತಿಲ್ಲ. ಇವತ್ತು ನಾನು ಮುಖ್ಯಮಂತ್ರಿ, ಹಿಂದೆ ಬೇರೆಯವರು ಇದ್ದರು, ನಾಳೆ ಮತ್ತೊಬ್ಬರು ಬರುತ್ತಾರೆ, ಇಲ್ಲಿ ಯಾರೂ ಶಾಶ್ವತವಲ್ಲ. ಆದರೆ, ಅಧಿಕಾರಿಗಳು ಕಾನೂನು ಬಾಹಿರವಾಗಿ ಅವರ ತಾಳಕ್ಕೆ ಕುಣಿದು ಈ ರೀತಿ ಲೋಪದೋಷವಾದರೆ ಆ ಅಧಿಕಾರಿಗಳನ್ನು ಸ್ವೇರ್ ಮಾಡುವುದಿಲ್ಲ.

12 PM

ಈಗಾಗಲೇ ನೀವು ಹೇಳಿದಂತೆ ನಾನು ತನಿಖೆಗೆ ಆದೇಶ ನೀಡಿದ್ದೇನೆ. ನೀವು ಈ ವಿಷಯದ ಬಗ್ಗೆ ವಿವರವಾದ ಚರ್ಚೆಯಾಗಬೇಕೆಂದು ಅಪೇಕ್ಷೆ ಪಟ್ಟಿದ್ದೀರಿ. ನಾಳೆಯವರಿಗೂ ಕೂಡ ಅಧಿವೇಶನ ಇದೆ. ಇನ್ನೂ ಅನೇಕ ವಿಷಯಗಳಿಗೆ ಸಂಬಂಧಪಟ್ಟಂತೆ ಚರ್ಚಿಸಬೇಕಾಗಿದೆ. ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯ ಸೇರಿ, ಆ ಎಲ್ಲಾ ವಿಷಯಗಳನ್ನು ವಿವರವಾಗಿ ಚರ್ಚೆ ಮಾಡುವುದಕ್ಕೆ ನಾನು ಸಿದ್ದನಿದ್ದೇನೆ. ಇವತ್ತು ನೀವು ಪ್ರಸ್ತಾಪ ಮಾಡದಿದ್ದರೆ, ನಾನು ಈ ಬಗ್ಗೆ ಉತ್ತರ ಕೊಡುತ್ತಿರಲಿಲ್ಲ. ಮಾನ್ಯ ಬಾಲಕೃಷ್ಣನವರು ಎದ್ದು ನಿಂತು ಇಂದು ಪ್ರಸ್ತಾಪ ಮಾಡಿದರು. ನಿನ್ನೆ ಮಾನ್ಯ ಕುಮಾರಸ್ವಾಮಿಯವರು ಇರಬಹುದು, ಮಾನ್ಯ ರೇವಣ್ಣನವರು ಇರಬಹುದು, ಇದರ ಬಗ್ಗೆ ಮತ್ತೆ ಮತ್ತೆ ಕೇಳಿದ್ದರಿಂದ ನಾನು enquiry ಗೆ ಸಿದ್ಧವೆಂದು ಹೇಳಿ, enquiry ಗೆ order ಮಾಡಿದ್ದೇನೆ. Enquiry report ಬರಲಿ ಅಥವಾ ಅದಕ್ಕಿಂತ ಮುಂಚೆಯೇ ನೀವು ಇನ್ನೂ ಕೆಲವು ಮಾಹಿತಿಗಳನ್ನು ಕೊಡಬೇಕೆಂದಿದ್ದರೆ, ಇವತ್ತಿನ ಕಾರ್ಯಕ್ರಮ ಮುಗಿಸಿ, ನಾಳೆ ಬೇಕಾದರೆ ಚರ್ಚೆ ಮಾಡಿ. ನಿಮ್ಮ ಯಾವುದೇ ಪ್ರಶ್ನೆಗಳಿಗೆ ನಾನು ಉತ್ತರ ಕೊಡಲಿಕ್ಕೆ ಸಿದ್ಧನಿದ್ದೇನೆ. ಅದು KPTCL appointment ಬಗ್ಗೆ

ಇರಬಹುದು, engineers appointment ಬಗ್ಗೆ ಇರಬಹುದು, ಬೇರೆ ಬೇರೆ ಆಗಿರುವಂತಹ ಲೋಪದೋಷಗಳ ಬಗ್ಗೆ ಇರಬಹುದು, ಬಿಚ್ಚು ಮನಸ್ಸಿನಿಂದ ಚರ್ಚೆ ಮಾಡಿದಾಗ, ವಾಸ್ತವವಾದ ಸತ್ಯ ಸಂಗತಿಗಳು ಕನ್ನಡ ನಾಡಿನ ಜನತೆಗೆ ಗೊತ್ತಾಗಲಿ. ಅದರ ಬಗ್ಗೆ ಚರ್ಚೆಗೆ ನಾನು ಸಿದ್ಧನಿದ್ದೇನೆ. ಆದರೆ ಇವತ್ತು ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡಲಿಕ್ಕೆ ಅವಕಾಶ ಮಾಡಿಕೊಡಿ. ಇಡೀ ಐದೂವರೆ ಕೋಟಿ ಜನ ಇದರ ಕಡೆಗೆ ಗಮನ ಕೊಡುತ್ತಿದ್ದಾರೆ. ನಾಳೆ ಅರ್ಧ ದಿವಸ ಪೂರ್ತಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ, ಅದಕ್ಕೆ ಬೇಕಾದ ವಿವರಗಳನ್ನು ಒದಗಿಸಿಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ನಾನು ಕೊಟ್ಟಿರುವ ವಿವರ ನೀವು ಪರಿಶೀಲಿಸಬಹುದು. ನೀವು ಅಧಿಕಾರ ನಡೆಸಿದವರು, ಎಲ್ಲಾ ಮಾಹಿತಿಗಳೂ ನಿಮ್ಮ ಹತ್ತಿರ ಇವೆ. ಅದರ documents ನಿಮ್ಮ ಹತ್ತಿರ ಇದೆ. ಏನು ಬೇಕಾದರೂ ನೀವು ಒದಗಿಸಿಕೊಡಿ. ಏನೇ ಸಣ್ಣ ಪುಟ್ಟ ದೋಷಗಳು ನಮ್ಮ ಕಡೆಯಿಂದ ಆಗಿದ್ದರೆ, ಅದನ್ನು ನಮ್ಮ ಗಮನಕ್ಕೆ ತನ್ನಿ. ರಾಜಕಾರಣದಲ್ಲಿ ಪಕ್ಷಗಳು ಬರುತ್ತವೆ, ಅಧಿಕಾರ ಬರುತ್ತದೆ, ಹೋಗುತ್ತದೆ, ಆದರೆ ಕಾನೂನು ಬಾಹಿರವಾಗಿ ಈ ರೀತಿ ಏನು ಕೆಲವೊಂದು ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆ, ಇದು ನನಗೆ ಗೊತ್ತಿರುವ ಪ್ರಕಾರ ಇತಿಹಾಸದಲ್ಲಿ ಹೊಸ ದಾಖಲೆಯಾಗಿದೆ. ಇದೊಂದು ಅಕ್ಷಮ್ಯ ಅಪರಾಧವಾಗಿದೆ. ಕಾನೂನು ಬಾಹಿರವಾಗಿ ಅಧಿಕಾರಿಗಳು ಮಾಡಿದ್ದಾರೆ. ಅದಕ್ಕಾಗಿ ತನಿಖೆಗೆ ಆದೇಶ ಮಾಡಿದ್ದೇನೆ. ನೀವು ವಿವರವನ್ನು ಕೊಡಿ. ನಾಳೆ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡೋಣ. ಬಹಳ ಮುಖ್ಯವಾಗಿ ನಿಮಗೆ ಏನು ಬೇಕು, ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯ ಬೇರೆ ಕಡೆಗೆ ಹೋಗುತ್ತದೆ ಎನ್ನುವ ಭಾವನೆ ನಿಮಗಿತ್ತು. ನಾನು ಹೇಳುತ್ತಿದ್ದೇನೆ. ಆ ಪ್ರಶ್ನೆಯೇ ಇಲ್ಲ. ಅದು ಬೇರೆ ಕಡೆಗೆ ಹೋಗುವುದಿಲ್ಲ. ಅದನ್ನು ಅಲ್ಲೇ ಮಾಡೋಣ. ಜಮೀನು ವಶಪಡಿಸಿಕೊಳ್ಳುವುದಕ್ಕಿಂತ ಮುಂಚೆಯೇ ಅದಕ್ಕೆ ಬೇಕಾದಂತಹ ಯಾವುದೇ ಮಂಜೂರಾತಿ ಪಡೆಯದೆ, ಯಾರೋ ಗುತ್ತಿಗೆದಾರನಿಗೆ 30–40 ಕೋಟಿ ರೂ.ಗಳನ್ನು ಕೊಡುವುದಾದರೆ ಹೇಗೆ? ಯಾರಪ್ಪನ ದುಡ್ಡು ಅದು? ಅವನು ಹೇಗೆ ಆ ದುಡ್ಡನ್ನು ತೆಗೆದುಕೊಳ್ಳುತ್ತಾನೆ? ನಾವು ಕ್ರಮ ತೆಗೆದುಕೊಂಡಿರುವುದು contractor ಮೇಲೆ. ನಾವು ವಿಶ್ವವಿದ್ಯಾನಿಲಯ ಮಾಡುವುದಕ್ಕೆ ಸಿದ್ಧರಿದ್ದೇವೆ ಎಂದ ಮೇಲೆ, ನೀವು ಏತಕ್ಕೋಸ್ಕರ ಇದರ ಬಗ್ಗೆ ಚರ್ಚೆ ಮಾಡುತ್ತೀರಿ? ತನಿಖೆ ಮಾಡಬೇಕು ಎನ್ನುತ್ತೀರಿ, ಈಗಾಗಲೇ ತನಿಖೆ ಮಾಡುತ್ತಿದ್ದೇವೆ. ಯಾರು ಲೋಪದೋಷಗಳನ್ನು ಮಾಡಿದ್ದಾರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ ಮೇಲೆ, ನೀವು ಅದರ ಬಗ್ಗೆ ಸ್ವಾಗತ ಮಾಡಬೇಕು. ಅದನ್ನು ಬಿಟ್ಟು ಇದರ ಬಗ್ಗೆ ಇಲ್ಲಿ ಚರ್ಚೆ ಏಕೆ

ಮಾಡುತ್ತೀರಿ? ಚರ್ಚೆ ಮಾಡಬೇಕೆನ್ನುವುದಾದರೆ, ಎಲ್ಲಾ ವಿಷಯದಲ್ಲೂ ನಾಳೆ ಬೆಳಿಗ್ಗೆ ಚರ್ಚೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ [ಹೊಳೆನರಸೀಪುರ]:– ಮಾನ್ಯ ಸಭಾದ್ಯಕ್ಷರೆ, ಮಾನ್ಯ ಸಭಾ ನಾಯಕರು ಏನು ಹೇಳಿದ್ದಾರೋ, ನನ್ನದೂ ಅದಕ್ಕೆ ಸ್ವಾಗತವಿದೆ. ಯಾರೇ ಅಧಿಕಾರಿ ತಪ್ಪು ಮಾಡಿದ್ದರೆ ಶಿಕ್ಷೆ ಕೊಡಲಿ. ಅದರಲ್ಲಿ ನನ್ನಿಂದ ಏನಾದರೂ ಲೋಪವಾಗಿದ್ದರೂ, ನಾನು ರೆಡಿ ಇದ್ದೇನೆ. ಒಂದೇ ಒಂದು, ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ಎಲ್ಲಾ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ನನ್ನ ಅಭ್ಯಂತರವಿಲ್ಲ. ಜಮೀನೇ hand-over ಆಗಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಹೇಳಿಕೆ ಕೊಟ್ಟರು. ಮಾನ್ಯ ಮುಖ್ಯಮಂತ್ರಿಗಳು ಜಮೀನು PWDಗೆ hand-over ಆಗಿಲ್ಲ, ಅವರಿಗೆ advance ಕೊಟ್ಟಿರುವುದು ಲೋಪ ಎಂದು ಹೇಳುವುದಾಗಿದ್ದರೆ, ನಾನು ಈ ಸದನದ ಸದಸ್ಯನಾಗಿ ಐದು ನಿಮಿಷ ಕೂಡ ಇರುವುದಿಲ್ಲ. ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ನಾನು ಹೊರಗೆ ಹೋಗುತ್ತೇನೆ. ಮಾನ್ಯ ಸಭಾಧ್ಯಕ್ಷರ ಆದೇಶದ ಪ್ರಕಾರ ಕಡತದಿಂದ ತೆಗೆದುಹಾಕಲಾಗಿದೆ. ಚರ್ಚೆ ಮಾಡಲಿಕ್ಕೆ ನಾನು ರೆಡಿ ಇದ್ದೇನೆ.

[ಗೊಂದಲ]

ಅಧ್ಯಕ್ಷರು:– please,ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಮಾನ್ಯ ರೇವಣ್ಣನವರೆ, ನಾಳೆ ಇದರ ಬಗ್ಗೆ ಚರ್ಚೆಗೆ ನಾನು ಅವಕಾಶ ಮಾಡಿಕೊಡುತ್ತೇನೆ. please ಈಗ ಈ ವಿಷಯವನ್ನು close ಮಾಡೋಣ. ನೀವು ಸರಿಯಾಗಿ subject ಮೇಲೆ ಮಾತನಾಡಬೇಕು. ಒಂದಕ್ಕೊದು ಪ್ರಚೋದನೆ ಮಾಡಿಕೊಳ್ಳುತ್ತಾ ಹೋದರೆ ಹೇಗೆ? ನಾಳೆ ಈ ವಿಷಯದ ಚರ್ಚೆಗೆ ನಾನು allow ಮಾಡುತ್ತೇನೆ. ಇದನ್ನು ಈಗ close ಮಾಡೋಣ. please, ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಈ ಬಗ್ಗೆ ಚರ್ಚೆ ಮಾಡುವುದಕ್ಕೆ ನಾಳೆ ನಿಮಗೆ ಅವಕಾಶ ಕೊಡುತ್ತೇನೆ. ಅದಕ್ಕೆ time fix ಮಾಡುತ್ತೇನೆ. ನಾನು ಈ ಬಗ್ಗೆ ಈಗಾಗಲೇ ಹೇಳಿದ್ದೇನೆ. ಮಾನ್ಯ ರೇವಣ್ಣನವರೆ ಮತ್ತು ಮಾನ್ಯ ಬಾಲಕೃಷ್ಣನವರೆ, ಈ ಒಂದು ವಿಷಯದ ಬಗ್ಗೆ ಚರ್ಚೆ ಮಾಡಲಿಕ್ಕೆ ನಾಳೆ ನಿಮಗೆ ನಾನು ಅವಕಾಶ ಕೊಡುತ್ತೇನೆ. ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. please, ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

Please, ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಮಾನ್ಯ ಸದಸ್ಯರಲ್ಲಿ ನನ್ನದೊಂದು ವಿನಂತಿ ಇದೆ. ಯಾವಾಗ ಸಭಾಧ್ಯಕ್ಷರು ತಮ್ಮ ಸ್ಥಾನದಲ್ಲಿ ಎದ್ದು ನಿಲ್ಲುತ್ತಾರೋ, ಆಗ ಎಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು. ಇದು ಸಭೆಯ ನಿಯಮ. ಇದನ್ನು ಯಾರಾದರೂ ಉಲ್ಲಂಘನೆ ಮಾಡಿದರೆ, ಮುಂದೆ ಅದರ ಬಗ್ಗೆ ಶಿಸ್ತಿನ ಕ್ರಮ ಕೈಗೊಳ್ಳಬೇಕಾಗುತ್ತದೆ. ಒಂದು ಸಲ ಸಭಾಧ್ಯಕ್ಷರು ಎದ್ದು ನಿಂತ ಮೇಲೆ, ಎಲ್ಲಾ ಸದಸ್ಯರು ತಕ್ಷಣವೇ ಕುಳಿತುಕೊಳ್ಳಬೇಕು. one minute, ಮಾನ್ಯ ಬಾಲಕೃಷ್ಣರವರೆ, ಈಗ ಈ ವಿಷಯ ಮುಕ್ತಾಯವಾಗಿದೆ. ನಾಳೆ ಇದರ ಬಗ್ಗೆ ಚರ್ಚೆಗೆ ನಾನು time fix ಮಾಡುತ್ತೇನೆ. ಅದನ್ನು ನನಗೆ ಬಿಡಿ. ಇದನ್ನು ಸಾಕು ಮಾಡಿ. ಸುಮ್ಮನೆ ವೇಳೆಯ ಅಪವ್ಯಯವಾಗುತ್ತಿದೆ.

[ಗೊಂದಲ]

ಮಾನ್ಯ ಬಾಲಕೃಷ್ಣರವರೆ, ನೀವು ಪದೇ ಪದೇ ಅದನ್ನೇ ಹೇಳುತ್ತಿದ್ದೀರಲ್ಲಾ. ನಾಳೆ ಮಧ್ಯಾಹ್ನದ ಮೇಲೆ ಇದರ ಬಗ್ಗೆ ಚರ್ಚೆಗೆ ನಾನು ಅವಕಾಶ ಕೊಡುತ್ತೇನೆ. please, ಎಲ್ಲರೂ ನಿಮ್ಮ ಸ್ಥಾನಗಳಿಗೆ ತೆರಳಿ.

[ಗೊಂದಲ]

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ನಾಳೆ agenda ದಲ್ಲಿ ಈ ವಿಷಯ ಸೇರಿಸಿ issue ಮಾಡಲಿಕ್ಕೆ ಅಧಿಕಾರಿಗಳಿಗೆ ಹೇಳಿ.

[ಗೊಂದಲ]

ಅಧ್ಯಕ್ಷರು:– please, ಎಲ್ಲರೂ ಕುಳಿತುಕೊಳ್ಳಿ. ಇದು ಸರಿಯಲ್ಲ. ನಮಗೂ ಒಂದು ತಾಳ್ಮೆ ಇದೆ. ನೋಡಿ, ಇದು ಸರಿಯಲ್ಲ,. ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ.

[ಗೊಂದಲ]

**[ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಜನತಾ ದಳ [ಜಾತ್ಯತೀತ] ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು]**

[ಗೊಂದಲ]

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾಳೆ ನಮಗೆ ಮಾತನಾಡಲು ಅವಕಾಶ ಕೊಡುತ್ತೀರಲ್ಲವೇ? ಮಾನ್ಯ ಮುಖ್ಯಮಂತ್ರಿಗಳು ಅರ್ಧ ದಿವಸ ಚರ್ಚೆಗೆ ಒಪ್ಪಿಕೊಂಡಿದ್ದಾರೆ. ಚರ್ಚೆ ಮಾಡೋಣ. ನನ್ನದೇನಾದರೂ prove ಆದರೆ, ಕ್ರಮ ತೆಗೆದುಕೊಳ್ಳಲಿ.

[ಗೊಂದಲ]

ಅಧ್ಯಕ್ಷರು:– ಆಯಿತು, ನಾಳೆ ಚರ್ಚೆಗೆ ಅವಕಾಶ ಕೊಡುತ್ತೇನೆ.

[ಗೊಂದಲ]

ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.

[ಗೊಂದಲ]

ಅಧ್ಯಕ್ಷರು:– ಆಕ್ಷೇಪಾರ್ಹವಾಗಿರುವ ಪದಗಳೇನಾದರೂ ಇದ್ದರೆ ನಾನು ಕಡತದಿಂದ ತೆಗೆಸಿ ಹಾಕುತ್ತೇನೆ. ಆ ಬಗ್ಗೆ ಕಡತ ತರಿಸಿ ನೋಡುತ್ತೇನೆ. ಆ ಜವಾಬ್ದಾರಿಯನ್ನು ನನಗೆ ಬಿಡಿ.

[ಗೊಂದಲ]

ಕಡತದಲ್ಲಿ ಅಂತಹ ಯಾವುದಾದರೂ ಪದಗಳಿದ್ದರೆ ನಾನು ತೆಗೆದು ಹಾಕುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

Please, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಈ ರೀತಿ ಮಾಡುವುದಾದರೆ, ನಿಮ್ಮೆಲ್ಲರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನೀವು ನೀವೇ ಪರಸ್ಪರ ಚರ್ಚೆ ಮಾಡುವುದಾದರೆ, ನಾವು ಸದನವನ್ನೇಕೆ ನಡೆಸಬೇಕು? ಈ ರೀತಿ ಆಶಿಸ್ತಿನಿಂದ ನಡೆದುಕೊಳ್ಳುವುದು ಸರಿಯಲ್ಲ. ಮಾನ್ಯ ಸದಸ್ಯರು ತಮ್ಮೊಳಗೆ ಪರಸ್ಪರ ಮಾತನಾಡಿಕೊಳ್ಳುವುದು ಸರಿಯಲ್ಲ. ಹೀಗಾದರೆ, ನಾನು ಸದನ ಹೇಗೆ ನಡೆಸಬೇಕು? ನಾನು ನಾಳೆ ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಒಬ್ಬರು ಮಾತನಾಡುವಾಗ ಮತ್ತೊಬ್ಬರು ಏಕೆ intervene ಮಾಡುತ್ತೀರಿ? ಹಾಗೆ ಮಾಡಿದರೆ, ನೀವು ಮಾತನಾಡುವುದಾದರೂ ಯಾರಿಗಾದರೂ ಕೇಳಿಸುತ್ತದೆಯೇ? ಅವರು ಮಾತನಾಡುವುದು ಯಾರಿಗಾದರೂ ಕೇಳಿಸುತ್ತದೆಯೇ? ಈ ರೀತಿ ಪದೇ ಪದೇ ಎದ್ದು ನಿಲ್ಲುವಂತಾದ್ದು ಸರಿಯಲ್ಲ. ಮುಂದೆ ಇದೇ ರೀತಿ ಆಗುವುದಾದರೆ, ನಾನು ಶಿಸ್ತಿನ ಕ್ರಮ ಕೈಗೊಳ್ಳಬೇಕಾಗುತ್ತದೆ. ಈ ಕಡೆಗೆ ಮತ್ತು ಆ ಕಡೆಗೆ ಎಲ್ಲರಿಗೂ ಸೇರಿಸಿ ನಾನು ಈ ಮಾತು ಹೇಳುತ್ತಿದ್ದೇನೆ..

[ಗೊಂದಲ]

ಶ್ರೀ ಅರವಿಂದ ಲಿಂಬಾವಳಿ:– ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

[ಗೊಂದಲ]

ಅಧ್ಯಕ್ಷರು:– ಅದನ್ನು ನಾನು ನೋಡಿ ತೆಗೆಯುತ್ತೇನೆ. ಅದನ್ನು ನನಗೆ ಬಿಡಿ. ಯಾವುದೇ ಆ ರೀತಿಯ ಪದಗಳಿದ್ದರೆ, ಅದನ್ನು ನಾನು ಕಡತದಿಂದ ತೆಗೆದು ಹಾಕುತ್ತೇನೆ.

[ಗೊಂದಲ]

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ...

[ಗೊಂದಲ]

ಅಧ್ಯಕ್ಷರು:– No, I Will not allow you. ಸುಮ್ಮನೆ time waste ಆಗುತ್ತದೆ.

[ಗೊಂದಲ]

ಈಗ ಮಾನ್ಯಧ್ರುವ ನಾರಾಯಣ್‌ರವರು ಬಜೆಟ್ ಮೇಲೆ ಚರ್ಚೆಯನ್ನು ಮುಂದುವರೆಸಿ ಮಾತನಾಡಲಿ.

[ಗೊಂದಲ]

ಶ್ರೀ ಎಂ.ಪಿ. ರೇಣುಕಾಚಾರ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಕ್ಷಮೆ ಕೇಳಲಿ. ಅಲ್ಲಿಯವರೆಗೆ ಯಾರಿಗೂ ಮಾತನಾಡಲಿಕ್ಕೆ ಅವಕಾಶ ಕೊಡಬೇಡಿ...

[ಗೊಂದಲ]

ಶ್ರೀ ಸಿದ್ದರಾಮಯ್ಯ:– ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

[ಗೊಂದಲ]

ಡಾ: ಹೆಚ್.ಸಿ. ಮಹಾದೇವಪ್ಪ : ಮಾನ್ಯ ಅಧ್ಯಕ್ಷರೆ, ಇನ್ನು ಮೇಲೆ ಗೊಂದಲ ನಿವಾರಣೆ ಮಾಡುವುದಕ್ಕೆ parliamentary words, un-parliamentary words ಎಂದು ಎಲ್ಲರಿಗೂ list ಕೊಟ್ಟುಬಿಟ್ಟರೆ they can use accordingly.

ಅಧ್ಯಕ್ಷರು:ಆlistನ್ನುannounceಮಾಡೋಣ ಬಿಡಿ. ಧ್ರುವನಾರಾಯಣ್‌ರವರೆ. ಬಜೆಟ್ ಮೇಲೆ ಚರ್ಚೆ ಪ್ರಾರಂಭ ಮಾಡಿ.

[ಗೊಂದಲ]

<u>7. ವಿತ್ತೀಯ ಕಾರ್ಯಕಲಾಪಗಳು</u>

**2008–2009ನೇ ಸಾಲಿನ ಆಯವ್ಯಯ ಅಂದಾಜುಗಳ ಮತ್ತು ಅನುದಾನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ**

ಶ್ರೀ ಆರ್. ಧ್ರುವನಾರಾಯಣ್ (ಕೊಳ್ಳೇಗಾಲ): ಮಾನ್ಯ ಅಧ್ಯಕ್ಷರೆ, ಇಂತಹ ಸಂದರ್ಭದಲ್ಲೂ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು.